ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ



ರಾಮಜನ್ಮಭೂಮಿ ಅಯೋಧ್ಯೆಯ ಶ್ರೀರಾಮಮಂದಿರದಲ್ಲಿ ಪ್ರಾಣಪ್ರತಿಷ್ಠಾಪನೆಗೊಂಡ ರಾಮಲಲಾನಿಗೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಪೇಜಾವರ ವಿಶ್ವಪ್ರಸನ್ನತೀರ್ಥ ನಮನ.

ಸಂಪುಟ : 45 | ಸಂಚಿಕೆ : 19 | ಪುಷ್ಯ-ಮಾಘ | ಕಲಿಯುಗಾಬ್ದ 5125 | 01-02-2024 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4

# ಪರೀಕ್ಷೆ: ಭಯವಲ್ಲ, ಸಂಭ್ರಮವಾಗಲಿ

**ಡಾ. ಮೈತ್ರಿ ಭಟ್,** ಸಹಾಯಕ ಪ್ರಾಧ್ಯಾಪಕಿ

ಜನವರಿ ಕಳೆದು ಫೆಬ್ರವರಿ ತಿಂಗಳು ಕಾಲಿಡುತ್ತಿದ್ದ ಹಾಗೆ ವಿದ್ಯಾರ್ಥಿಗಳಲ್ಲಿ ಅದೇನೋ ಒಂದು ರೀತಿಯ ಭಯ, ಗಾಬರಿ, ಗೊಂದಲ, ಚಡಪಡಿಕೆ ಮನದೊಳಗೆ ಮೂಡಲಾರಂಭಿಸುತ್ತದೆ. ಬಿಸಿಲಿನ ಕಾವಿನೊಡನೆ ಮೂಡುವ ಪರೀಕ್ಷೆಯ ಕಾವು ಮನೆಯೊಳಗೆ ಒಂದು ಬಗೆಯ ಬಿಸಿ ವಾತಾವರಣವನ್ನು ಸೃಷ್ಟಿಸುತ್ತದೆ. ವಿದ್ಯಾರ್ಥಿಗಳಿಗೆ ಅವರ ವಿದ್ಯಾರ್ಥಿ ಬದುಕಿನ ಅಗ್ನಿಪರೀಕ್ಷೆ ಈ ಸಮಯದಲ್ಲಿ ಆರಂಭವಾಗುತ್ತದೆ. ಅದುವರೆಗೆ ಶಾಲೆಯಲ್ಲಿ ನಡೆದ ಪಾಠ, ಪ್ರವಚನಗಳನ್ನು ಸರಿಯಾಗಿ ಓದಿ ಯಾವುದೇ ರೀತಿಯಲ್ಲಿ ಭಯ, ಗೊಂದಲಕ್ಕೆ ಒಳಗಾಗದೆ ಮೂರು ಗಂಟೆಗಳಲ್ಲಿ ನೆನಪಿನಿಂದ ಹೆಕ್ಕಿ ತೆಗೆದು ಸಲೀಸಾಗಿ ಪ್ರಶ್ನೆಗಳಿಗೆ ಉತ್ತರಿಸುವುದು ವಿದ್ಯಾರ್ಥಿ ಜೀವನದಲ್ಲಿ ಎದುರಿಸುವ ಬಹುಮುಖ್ಯ ಸವಾಲೇ ಆಗಿರುತ್ತದೆ.

**ಕಾಡುವ ಭಯ ಕದಡದಿರಲಿ:** ಎಲ್ಲಾ ವಿದ್ಯಾರ್ಥಿಗಳ ಮನಃಸ್ಥಿತಿ ಒಂದೇ ಆಗಿರುವುದಿಲ್ಲ. ಕೆಲವರು ಅಂದಂದಿನ ಪಾಠ ಅಂದೇ ಓದಿ ಪರೀಕ್ಷೆಗೆ ಬೇಕಾದ ತಯಾರಿ ನಡೆಸಿದ್ದರೆ, ಇನ್ನೂ ಕೆಲವರು ಪರೀಕ್ಷೆಯ ಹಿಂದಿನ ದಿನ ಮೆಲ್ಲನೆ ಪುಸ್ತಕ ತೆರೆಯುತ್ತಾರೆ. ಹಾಗೆಂದು ಪರೀಕ್ಷಾ ಭಯ ಓದದ ವಿದ್ಯಾರ್ಥಿಗೆ ಮಾತ್ರ ಇರುತ್ತದೆ ಅಥವಾ ಇರಲೇಬೇಕು ಎಂದೇನೂ ಇಲ್ಲ. ಬದುಕಿನ ಯಾವುದೋ ಕ್ಷಣದಲ್ಲಿ ಈ ಭಯ ಹೆಚ್ಚಿನ ಎಲ್ಲರನ್ನೂ ಕಾಡಿರುತ್ತದೆ.

ಪರೀಕ್ಷೆಯಲ್ಲಿ ಜಯವನ್ನು ಸಾಧಿಸಿ ಬರುವುದಕ್ಕೆ ಅದು ಯುದ್ಧವೇನೂ ಅಲ್ಲ, ಇಲ್ಲಿ ನಮ್ಮೊಡನೆ ನಾವು ಸ್ಪರ್ಧಿಸಬೇಕಿದೆ. ಪ್ರಧಾನಿ ನರೇಂದ್ರ ಮೋದಿ ಅವರು ನುಡಿದಂತೆ 'ಪರೀಕ್ಷೆ ಬಗ್ಗೆ ಭಯಪಡುವ ಬದಲು ಅದನ್ನು ಸಂಭ್ರಮಿಸಬೇಕಿದೆ. ಪರೀಕ್ಷೆ ಎನ್ನುವುದು ಕೊನೆಯ ಅವಕಾಶವಲ್ಲ; ಅದು ಸುದೀರ್ಘ ಜೀವನವನ್ನು ಕಳೆಯಲು ನಮ್ಮನ್ನು ನಾವು ರೂಪಿಸಿಕೊಳ್ಳುವ ಸದವಕಾಶ. ಆದರೆ ಭಯ ಇರುವುದು ಪರೀಕ್ಷೆ ಬಗೆಗೆ ಅಲ್ಲ. ಸುತ್ತಲಿನ ಸಮಾಜ 'ಪರೀಕ್ಷೆಯೇ ಸರ್ವಸ್ವ, ಇದೇ ಜೀವನ' ಎಂಬ ವಾತಾವರಣ ಮೂಡಿಸಿದ ಕಾರಣ ಮನದೊಳಗೆ ಆತಂಕ ಮೂಡುತ್ತದೆ. ಹೊರಗಿನ ಭಯ ಕಡಿಮೆಯಾದಾಗ ಪರೀಕ್ಷೆಯ ಒತ್ತಡವೂ ಕಡಿಮೆಯಾಗಿ ಆತ್ಮವಿಶ್ವಾಸ ಮೂಡುತ್ತದೆ.'




**ಪರೀಕ್ಷೆ : ಹೀಗೆಂದರೇನು?** ಪರೀಕ್ಷೆ ಎನ್ನುವುದು ವಿದ್ಯಾರ್ಥಿಯ ಜೀವನಘಟ್ಟದಲ್ಲಿ ಮಹತ್ತರವಾದ ಮೈಲುಗಲ್ಲು. ಪ್ರತಿಯೊಬ್ಬ ಹೆತ್ತವರೂ ತಮ್ಮ ಮಕ್ಕಳು ಪರೀಕ್ಷೆಯಲ್ಲಿ ಚೆನ್ನಾಗಿ ಮಾಡಲಿ ಎಂದು ಆಶಿಸುವುದು ಸಹಜ. ಪರೀಕ್ಷೆಯ ಮೂಲಕ ವಿದ್ಯಾರ್ಥಿಗಳು ಕಾಲಕಾಲಕ್ಕೆ ಪಡೆದ ಜ್ಞಾನ, ಕೌಶಲಗಳನ್ನು ಅಳೆಯಲಾಗುತ್ತದೆ. ಇದರಿಂದ ಜ್ಞಾನ, ಕೌಶಲದ ಮಟ್ಟವನ್ನು ತಿಳಿದು ದೌರ್ಬಲ್ಯಗಳನ್ನು ಉತ್ತಮಪಡಿಸಿಕೊಳ್ಳಬಹುದು.

**ಕಾಡುವ ಆತಂಕ:** ಚೆನ್ನಾಗಿ ಓದಿ ತಯಾರಿ ನಡೆಸಿದ ವಿದ್ಯಾರ್ಥಿ ಕೂಡಾ ಓದಿದ್ದೆಲ್ಲ ಎಲ್ಲಿ ಮರೆತು ಹೋಗುವುದೋ ಎಂದು ಚಿಂತಿಸಿದರೆ, ಓದದೇ ಇರುವ ವಿದ್ಯಾರ್ಥಿಯ ಆತಂಕ ಹೇಳತೀರದು. ಬದಲಾದ ಸಾಮಾಜಿಕ ಪರಿಸ್ಥಿತಿ ಹಾಗೂ ಹೆಚ್ಚಿದ ಸಾಮಾಜಿಕ ಒತ್ತಡದಿಂದ 'ಪರೀಕ್ಷೆ' ಎಂಬುದು 'ಆತಂಕ'ವಾಗಿ ಹಿಂದೆಂದೂ ಕಾಣದಷ್ಟು ಪ್ರಾಮುಖ್ಯತೆಯನ್ನು ಪಡೆಯುತ್ತಿದೆ. ಒಂಭತ್ತನೆಯ ತರಗತಿಯವರೆಗೆ ವಿದ್ಯಾರ್ಥಿಗಳನ್ನು ಫೇಲ್ ಮಾಡುವಂತಿಲ್ಲ ಎನ್ನುವ ಸತ್ಯ ಗೊತ್ತಿದ್ದರೂ ಎಲ್‌ಕೆಜಿ, ಯುಕೆಜಿಯಲ್ಲಿ ಕಲಿಯುತ್ತಿರುವ ಮಕ್ಕಳು ಕೂಡಾ ಪರೀಕ್ಷೆಯೆಂದರೆ ಭಯಪಡುವ ಸಂದರ್ಭಗಳನ್ನು ಕಾಣುತ್ತಿದ್ದೇವೆ. ಇಂತಹ ಕಾಲೇಜಿನಲ್ಲೇ ಸೀಟ್ ತೆಗೆದುಕೊಳ್ಳಬೇಕು, ಇದೇ ವಿಷಯ, ವೃತ್ತಿ ಆಯ್ಕೆಯ ಚಿಂತನೆಗಳು, ಹೆಚ್ಚುತ್ತಿರುವ ಸಹಪಾಠಿಗಳೊಂದಿಗಿನ ಸ್ಪರ್ಧೆ, ಇತರರೊಂದಿಗೆ ಹೋಲಿಕೆ, ಪೋಷಕರ ಹೆಚ್ಚಿನ ನಿರೀಕ್ಷೆಗಳ ಕಾರಣ ಮಕ್ಕಳಲ್ಲಿ ಒತ್ತಡ, ಆತಂಕ ಮತ್ತು ಭಯ ಹೆಚ್ಚಾಗುತ್ತದೆ.

**ಹೆತ್ತವರನ್ನೂ ಕಾಡುವ ಆತಂಕ:** ಪರೀಕ್ಷಾ ಒತ್ತಡ, ಭಯ ಹಾಗೂ ಆತಂಕವನ್ನು ವಿದ್ಯಾರ್ಥಿಗಳಂತೆ ಅವರ ತಂದೆ-ತಾಯಿಯರೂ




ಅನುಭವಿಸುತ್ತಿರುತ್ತಾರೆ. ತಂದೆ-ತಾಯಿ ಇಬ್ಬರೂ ದುಡಿಯಲು ಹೊರಗೆ ಹೋಗುತ್ತಿದ್ದರೆ ಮನಸ್ಸಿನ ಒಂದು ಮೂಲೆಯಲ್ಲಿ ತಾನು ಮಕ್ಕಳಿಗೆ ಸರಿಯಾಗಿ ಸಮಯ ಕೊಡುತ್ತಿದ್ದೇನೋ ಇಲ್ಲವೋ, ಭಾವನಾತ್ಮಕ ಬೆಂಬಲ ನೀಡುತ್ತಿದ್ದೇನೋ ಇಲ್ಲವೋ ಎಂಬ ವಿಷಯವೂ ಕೊರೆಯುತ್ತಿರಬಹುದು. ಪರೀಕ್ಷೆ ಸಮೀಪಿಸಿದಂತೆ ಮಕ್ಕಳಿಗಿಂತಲೂ ಹೆಚ್ಚಾಗಿ ಹೆತ್ತವರು ಆತಂಕಕ್ಕೆ ಒಳಪಟ್ಟು ಮಕ್ಕಳನ್ನು ಪರೀಕ್ಷೆಗೆ ಅಣಿಗೊಳಿಸಲು ಪ್ರಾರಂಭಿಸುತ್ತಾರೆ. ಶಾಲೆಯಲ್ಲಿ ಶಿಕ್ಷಕರದೂ ಕೂಡಾ 'ಪರೀಕ್ಷೆ ಹತ್ತಿರ ಬಂತು, ಈ ಬಾರಿ ಪಬ್ಲಿಕ್ ಪರೀಕ್ಷೆ. ಗಮನವಿಟ್ಟು ಓದಿ, ಸಮಯ ಹಾಳು ಮಾಡಬೇಡಿ' ಎನ್ನುವ ಸಲಹೆ. ಹೀಗೆ ಅರಿವಿಲ್ಲದೆಯೇ ಪರೀಕ್ಷೆಯ ಭಯ ಮನದೊಳಗೆ ಮೆಲ್ಲನೇ ಕಾಲಿಟ್ಟು ಪೆಡಂಭೂತವಾಗಿ ಕಾಡುತ್ತದೆ. ಹಾಗೆಂದು ಪರೀಕ್ಷೆ ಬಗ್ಗೆ ಭಯ ಬೇಡವೆಂದಲ್ಲ. ಸಣ್ಣಮಟ್ಟದ ಆರೋಗ್ಯಕರ ಭಯವು ಏಕಾಗ್ರತೆಯನ್ನು ಹೆಚ್ಚಿಸಿ ವಿದ್ಯಾರ್ಥಿಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತದೆ. ಆದರೆ ಅದು ಅತಿಯಾಗದಂತೆ ನೋಡಿಕೊಳ್ಳಬೇಕಾದುದು ಅಗತ್ಯ.

### ಆತಂಕದ ಪರಿಣಾಮಗಳು:

- ಪರೀಕ್ಷಾ ಭಯದಿಂದ ನಿಶ್ಚಿಂತ ಅಧ್ಯಯನ ಸಾಧ್ಯವಾಗದೆ ಏಕಾಗ್ರತೆಯಿಲ್ಲದೆ ಓದಿದ್ದು ನೆನಪಿನಲ್ಲಿ ಉಳಿಯದಂತೆ ಮಾಡುತ್ತದೆ.
- ಹಸಿವು ಮಾಯವಾಗಿ ಮೊದಲಿನ ಆಸಕ್ತಿ, ಲವಲವಿಕೆ ಕಳೆದುಕೊಂಡು ಎಲ್ಲರೊಡನೆ ಬೆರೆಯದೆ ಏಕಾಂಗಿ ಆಗುವಂತೆ ಮಾಡಬಹುದು.
- ತಲೆನೋವು, ಕಣ್ಣುರಿಯಂಥ ಅನಾರೋಗ್ಯಗಳಿಗೆ ಕಾರಣವಾಗುತ್ತದೆ.
- ಪದೇಪದೇ ಮೂತ್ರ ವಿಸರ್ಜನೆಗೆ ಹೋಗಬೇಕೆನಿಸುವುದು, ಎದೆಬಡಿತ, ಉಸಿರಾಟದ ವೇಗ ಹೆಚ್ಚಾಗುವುದು, ವಿಷಯ ಮರೆತು ಹೋದಂತೆ ಭಾಸವಾಗುವುದು ಕಂಡು ಬರಬಹುದು.

**ಹಾಗಾದರೆ, ಎದುರಿಸುವುದು ಹೇಗೆ?** ಪರೀಕ್ಷಾ ಸಮಯ ಎಂಬುದು ವರ್ಷದಲ್ಲಿ ಒಮ್ಮೆ ಎದುರಾಗುವ ಒತ್ತಡದ ಸಮಯ. ವಿದ್ಯಾರ್ಥಿಗಳು ಕಷ್ಟಪಟ್ಟು ಓದಿ, ಚೆನ್ನಾಗಿ ಅಭ್ಯಾಸ ಮಾಡಿದ್ದರೆ ಪರೀಕ್ಷೆಗೆ ಹೆದರಬೇಕಿಲ್ಲ. ಇದು ವಿದ್ಯಾರ್ಥಿಗಳ ಪ್ರತಿಭೆ, ಸಾಮರ್ಥ್ಯವನ್ನು ಪ್ರದರ್ಶಿಸಲು ಒಂದು ಸದವಕಾಶವಾಗಿರುತ್ತದೆ. ಆದುದರಿಂದ –

- **ಧನಾತ್ಮಕ ಚಿಂತನೆ ಮನದಲ್ಲಿರಲಿ:** 'ನಾನೆಲ್ಲಾದರೂ ಉತ್ತಮ ಅಂಕ ಗಳಿಸದಿದ್ದರೆ, ನಾನು ಪರೀಕ್ಷೆಯಲ್ಲಿ ಅನುತ್ತೀರ್ಣನಾದರೆ' ಎಂಬ ಋಣಾತ್ಮಕ ಆಲೋಚನೆಗಳು ಸಹಜವಾಗಿ ಮೂಡಿ ಆ ಕ್ಷಣದಲ್ಲಿ ಧೃತಿಗೆಡಿಸದಂತೆ ನಿಮ್ಮನ್ನು ನೀವು ಸಂತೈಸಿಕೊಳ್ಳಿ. ಸಹನೆಯಿಂದ ಇದ್ದು ಮನಸ್ಸನ್ನು ಹತೋಟಿಗೆ ತಂದುಕೊಂಡು ಪರೀಕ್ಷೆಯನ್ನು ಎದುರಿಸಲು ಸಿದ್ಧರಾಗಿ. ನಿಮ್ಮ ಸಾಮರ್ಥ್ಯ ಮತ್ತು ಜ್ಞಾನದ ಮೇಲೆ ಸದಾ ನಂಬಿಕೆ ಇರಲಿ.
- **ಪರಿಶ್ರಮಯುಕ್ತ ಪ್ರಯತ್ನವಿರಲಿ:** 'ಯುದ್ಧ ಕಾಲೇ ಶಸ್ತ್ರಾಭ್ಯಾಸ' ಎಂಬ ಬದಲು ಪ್ರತಿದಿನದ ಓದಿನೊಡನೆ ಅಂಕಗಳ ಹಿಂದೆ ಓಡದೆ ಜ್ಞಾನ ಹೆಚ್ಚಿಸುವತ್ತ ಗಮನ ಹರಿಸಿ. ನಿಮ್ಮ ಸಾಮರ್ಥ್ಯಕ್ಕೆ ತಕ್ಕ ವೇಳಾಪಟ್ಟಿಯೊಡನೆ ಪರೀಕ್ಷಾ ಕೇಂದ್ರದಲ್ಲೂ ಸಮಯ ನಿರ್ವಹಣೆಯ ಬಗ್ಗೆ ಗಮನವಿರಲಿ.
- **ಬರೆವಣಿಗೆ ಶೈಲಿ ಹೀಗಿರಲಿ:** ಬರೆವಣಿಗೆಯ ಶೈಲಿ ಮೌಲ್ಯಮಾಪನದ ಮೇಲೆ ಪರಿಣಾಮ ಬೀರುವ ಕಾರಣ ಅಂದವಾದ, ತಪ್ಪಿಲ್ಲದ ಬರೆವಣಿಗೆ, ಸುತ್ತಿ ಬಳಸುವ ಗೊಂದಲದ ವಾಕ್ಯಗಳಿಲ್ಲದೆ, ಸರಳ, ನೇರ ಭಾಷೆಯಲ್ಲಿ ಎಷ್ಟು ಸೂಕ್ತವೋ ಅಷ್ಟೇ ಉತ್ತರ ನಿಮ್ಮದಾಗಿರಲಿ.
- **ಸೋಲು ಸೋಲಿಸದಿರಲಿ:** ವೈಫಲ್ಯಕ್ಕೆ ಹೆದರಬೇಡಿ. ಫಲಿತಾಂಶದ ಬಗೆಗೆ ಯೋಚಿಸದೆ ತಮ್ಮನ್ನು ತಾವು ಸಂಪೂರ್ಣ ಓದಿನಲ್ಲಿ ತೊಡಗಿಸಿಕೊಂಡು ಸತತ ಓದು, ಬರೆವಣಿಗೆ, ಚರ್ಚೆ, ಮನನದಲ್ಲಿ ತೊಡಗಿಸಿಕೊಂಡಾಗ ಯಶಸ್ಸು ಖಚಿತ.
- **ತಂತ್ರಜ್ಞಾನದ ಹಿತಮಿತ ಬಳಕೆ ನೆನಪಿರಲಿ:** ತಂತ್ರಜ್ಞಾನವು ಉತ್ತಮ ಶಿಕ್ಷಕ. ಅದನ್ನು ಅತ್ಯುತ್ತಮವಾಗಿ ಬಳಸಿ. ಆದರೆ ಅನಗತ್ಯ ಬಳಕೆ ಸಲ್ಲದು.
- **ಪ್ರಯತ್ನದೊಂದಿಗೆ ಸಿದ್ಧರಾಗಿ:** ಹಿಂದಿನ ಪ್ರಶ್ನೆಪತ್ರಿಕೆಗಳಿಗೆ ಉತ್ತರಿಸಲು ಪ್ರಯತ್ನಿಸಿ. ಅರ್ಥವಾಗದ ಕಷ್ಟಕರ ಪ್ರಶ್ನೆಗಳ ಬಗ್ಗೆ ಅಧ್ಯಾಪಕರು, ಹಿರಿಯರೊಂದಿಗೆ ಚರ್ಚಿಸಿ.
- **ಚೆನ್ನಾಗಿ ನಿದ್ರಿಸಿ:** ನಿದ್ದೆಗೆಟ್ಟು ಓದಬೇಡಿ. ಸರಿಯಾದ ನಿದ್ದೆ ಮತ್ತು ವಿಶ್ರಾಂತಿಯೊಡನೆ ಉತ್ತಮ ದೈಹಿಕ ಆರೋಗ್ಯ ಹೊಂದಿದಾಗ ಮಾತ್ರ ನಮ್ಮ ಮಿದುಳು ಉತ್ತಮವಾಗಿ ಕಾರ್ಯ ನಿರ್ವಹಿಸಬಲ್ಲುದು.
- **ಮಗ್ನತೆ ಹೆಚ್ಚಿಸಲು ಯೋಗ, ಧ್ಯಾನವಿರಲಿ:** ಇವು ಆತ್ಮವಿಶ್ವಾಸ, ಸ್ಮರಣೆ, ಏಕಾಗ್ರತೆಯನ್ನು ಹೆಚ್ಚಿಸುತ್ತವೆ. ಅದರಲ್ಲೂ ಸೂರ್ಯ ನಮಸ್ಕಾರವು ಸಕಾರಾತ್ಮಕತೆ ಮತ್ತು ಶಾಂತಿಯನ್ನು ತುಂಬಲು ಸಹಕಾರಿ.



**ಹೆತ್ತವರಿಗೆ ನೆನಪಿರಲಿ:** ಪ್ರತಿಯೊಂದು ಮಗುವೂ ಹುಟ್ಟುವಾಗಲೇ ಅನನ್ಯ ಮತ್ತು ಅದ್ವಿತೀಯವಾದ ಸಾಮರ್ಥ್ಯವನ್ನು ಹೊಂದಿರುತ್ತದೆ. ಮಕ್ಕಳೆಲ್ಲರೂ ಒಬ್ಬರಿಗಿಂತ ಒಬ್ಬರು ವಿಭಿನ್ನ. ಎಲ್ಲರೂ ಪ್ರತಿಭಾನ್ವಿತರು ಆಗಿರಲು ಸಾಧ್ಯವಿಲ್ಲ. ಮಕ್ಕಳ ಮೇಲೆ ಹೇರುವ ಅನಗತ್ಯ ಅಂಕ ಗಳಿಕೆಯ ಒತ್ತಡ ಪರೀಕ್ಷೆ ಬಗೆಗಿನ ಅನಗತ್ಯ ಭಯ, ಒತ್ತಡಕ್ಕೆ ಕಾರಣವಾಗುತ್ತದೆ. ನಾವು ಮಕ್ಕಳ ಮುಂದೆ ತಮ್ಮ ಭಯ, ಆತಂಕ ವ್ಯಕ್ತಪಡಿಸಿದರೆ ಅದು ಮಕ್ಕಳ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ. ಹಾಗಾಗಿ ಧನಾತ್ಮಕವಾಗಿ ಯೋಚಿಸಿ, ಆದಷ್ಟೂ ಶಾಂತವಾಗಿರಿ.

### ನೆನಪಿರಲಿ...

ಮಕ್ಕಳು ಅಂಕ ಗಳಿಸುವ ಯಂತ್ರಗಳಾಗದೇ ಪರಿಪೂರ್ಣ ಮಾನವರಾಗಲಿ. ಪಾಸು ಫೇಲುಗಳಾಚೆಯೂ ಬದುಕು, ಭವಿಷ್ಯವಿದೆ. ಎಷ್ಟೋ ಭಾರೀ ಪರೀಕ್ಷೆಯಲ್ಲಿ ಫೇಲಾದ ವಿದ್ಯಾರ್ಥಿ ಜೀವನದ ಪರೀಕ್ಷೆಯಲ್ಲಿ ಗೆದ್ದರೆ, ಪರೀಕ್ಷೆಯಲ್ಲಿ ರ್‍ಯಾಂಕುಗಳಿಸಿದ ವಿದ್ಯಾರ್ಥಿ ನಿಜ ಜೀವನದ ಪರೀಕ್ಷೆಯಲ್ಲಿ ಮುಗ್ಗರಿಸಿದ್ದಿದೆ. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿದ್ಯಾರ್ಥಿಗಳ ಭವಿಷ್ಯಕ್ಕೆ ಅಂಕಗಳೇ ಮಾನದಂಡ ಎಂಬುದು ನಿಜವಾದರೂ, ಅದೊಂದರಿಂದಲೇ ಬದುಕು ನಿರ್ಣಯವಾಗುವುದಿಲ್ಲ ಎನ್ನುವುದು ಅಷ್ಟೇ ಸತ್ಯ. ಮಕ್ಕಳು ತಮ್ಮ ನಿರೀಕ್ಷೆಯಂತೆ ಪರೀಕ್ಷೆಯಲ್ಲಿ ಅಂಕ ಗಳಿಸದಿದ್ದಾಗ ಆಕಾಶವೇ ಕಳಚಿ ಬಿದ್ದಂತೆ ವರ್ತಿಸದೇ, ಪ್ರೀತಿ ಕಡಿಮೆಯಾಗಿಸದೇ, ಅವರ ಬದುಕು ಮುಗಿದೇ ಹೋಯಿತೆಂದು ಗೋಳಾಡದೆ, ಮಕ್ಕಳಿಗೆ ಮಾನಸಿಕ ಧೈರ್ಯ-ಸ್ಥೈರ್ಯ ತುಂಬಿ ಸಮಾಧಾನಿಸಿ, ಮನವೊಲಿಸಿ, ಭವಿಷ್ಯದ ಕುರಿತು ತಿಳಿಹೇಳುವ ಮೂಲಕ ಅವರ ಭವಿಷ್ಯವ ಬೆಳಗಿಸುವ ಹಾದಿಯ ಪಯಣ ನಮ್ಮೆಲ್ಲರದೂ ಆಗಿರಲಿ ಎಂದು ಮುಂದಡಿಯಿಡೋಣ.

■


## ಸಂಸ್ಮರಣೆ

## ಭೀಮಸೇನ ಜೋಶಿ (4 ಫೆಬ್ರವರಿ, 1922 – 24 ಜನವರಿ, 2011)

"ಜೋಶಿ ನೀವು ರಾಜ್ಯಸಭೆಗೆ ಯಾಕೆ ಹೋಗಬಾರದು?" ಎಂದು ಯಾರೋ ಬಾಯಿ ಮಾತಿಗೆ ಹೇಳಿದಾಗ "ನನ್ನಲ್ಲಿರುವ ಎರಡು ತಂಬೂರಿಗಳೇ ರಾಜ್ಯಸಭೆ ಮತ್ತು ಲೋಕಸಭೆ" ಎಂದವರು ತಮ್ಮ ಧ್ವನಿಯಿಂದ ಇಡೀ ಭಾರತೀಯರನ್ನು ಕಾಡಿದ ಈ ನೆಲದ ಅಸಾಮಾನ್ಯ ಗಾಯಕ ಪಂ. ಭೀಮಸೇನ ಜೋಶಿ. ಜೋಶಿ ದಶಕಗಳ ಕಾಲ ಶುದ್ಧವಾಗಿ ಹರಿದ ನಾದಗಂಗೆ. ಅವರು ಸಂಗೀತವನ್ನೇ ಬದುಕಾಗಿಸಿಕೊಂಡು ಸಂಗೀತಕ್ಕಾಗಿಯೇ ಬದುಕಿದವರು. ತಮ್ಮ ಗಾಯನದಿಂದ ಎಲ್ಲವನ್ನು ಮತ್ತು ಎಲ್ಲರನ್ನೂ ಗೆದ್ದವರು. ನಿಜ ಅರ್ಥದಲ್ಲಿ ಜೋಶಿ ಪವಾಡ ಪುರುಷ. ಅವರು ತಮ್ಮ ಅಪಾರವಾದ ಸಂಗೀತ ಸಾಧನೆಯಿಂದಲೇ ತಲೆಮಾರುಗಳನ್ನು ಮೋಡಿಗೊಳಿಸಿದವರು. ತಾವು ಇರುವ ಕಾಲಕ್ಕೂ ಸಂಗೀತದ ವಿಸ್ಮಯ ಲೋಕವೊಂದನ್ನು ಸೃಷ್ಟಿಸಿದ್ದವರು. ತಮ್ಮ ಅಸಂಖ್ಯಾತ ಶಿಷ್ಯರಿಗೆ ಸ್ವರ ಸಂಸ್ಕಾರವನ್ನು ಕಲಿಸಿದವರು.

**ಭೀಮಸೇನ ಜೋಶಿ ಪರಿಚಯ:** ಭಾರತರತ್ನ ಪಂ.ಭೀಮಸೇನ ಜೋಶಿ ಮೂಲತಃ ಕರ್ನಾಟಕದ ಗದಗ ಜಿಲ್ಲೆಯವರು. ಗುರುರಾಜ ಜೋಶಿ ಮತ್ತು ಗೋದುಬಾಯಿ ದಂಪತಿ ಪುತ್ರರಾಗಿ 1922 ಫೆಬ್ರವರಿ 4 ರಂದು ಜನಿಸಿದ ಜೋಶಿಯವರು ಬಾಲ್ಯದಲ್ಲೇ ಸಂಗೀತಕ್ಕಾಗಿ ತಮ್ಮನ್ನು ಅರ್ಪಿಸಿಕೊಂಡಿದ್ದರು. ಹಸಿವು ಮತ್ತು ನೀರಡಿಕೆಯನ್ನು ಮರೆತು ಸಂಗೀತವನ್ನು ಅಭ್ಯಸಿಸಿದ್ದರು. ಜೋಶಿಯವರಿಗೆ ಸವಾಯಿ ಗಂಧರ್ವ ಅವರ ಮಾರ್ಗದರ್ಶನ ದೊರೆಯಿತು. ಬಹುಮುಖ್ಯವಾಗಿ ಜೋಶಿ ಹಿಂದೂಸ್ಥಾನಿ ಸಂಗೀತದಲ್ಲಿ ಪ್ರಸಿದ್ಧರಾಗಿದ್ದವರು. ಕೀರ್ತನೆ, ದಾಸಪದ್ಯ, ಭಜನೆ, ಮರಾಠಿ ಅಭಂಗ ಮತ್ತು ನಾಟ್ಯಗೀತೆಗಳನ್ನು ಹಾಡುವ ಮೂಲಕ ಜೋಶಿ ಎಲ್ಲರ ಮನೆಗಳಿಗೆ ಹತ್ತಿರವಾಗಿದ್ದರು.

**ಕನ್ನಡದಲ್ಲೂ ಹಾಡಿದ್ದ ಕನ್ನಡಿಗ ಜೋಶಿ:** "ಭಾಗ್ಯದ ಲಕ್ಷ್ಮಿ ಬಾರಮ್ಮ" ಎಂಬ ಕನ್ನಡದ ದಾಸ ಪದ್ಯವನ್ನು ಜೋಶಿ ಮಾಂತ್ರಿಕವಾಗಿ ಹಾಡಿ ಕನ್ನಡಿಗರನ್ನೂ ಬೆರಗುಗೊಳಿಸಿದವರು. ಜೋಶಿ ಭಕ್ತಿ ಭಾವದಿಂದ ಹಾಡಿದ ಹತ್ತಾರು ಕನ್ನಡ ಭಜನಾ ಗೀತೆಗಳನ್ನು ಕೇಳಿ ಈಗಲೂ ಆನಂದಪಡುವವರಿದ್ದಾರೆ.



**ಪ್ರಶಸ್ತಿ ಮತ್ತು ಪುರಸ್ಕಾರ:** ಜೋಶಿ ಅವರಿಗೆ ಪದ್ಮಶ್ರೀ ಬಂದಾಗ ಅವರ ಶಿಷ್ಯರು ಅವರನ್ನು ಅಭಿನಂದಿಸಲು ಹಾರ, ತುರಾಯಿಗಳೊಂದಿಗೆ ಹೋದಾಗ "ಅದನ್ನು ಅಲ್ಲಿಡಿ ನಡೀರಿ ತಂಬೂರಿ ಹಚ್ಚಿ" ಎಂದಿದ್ದರಂತೆ. ಅಂದರೆ ಭೀಮಸೇನ ಜೋಶಿ ಎಂದಿಗೂ ಪ್ರಶಸ್ತಿಯ ಗೀಳಿಗೆ ಬಿದ್ದವರಲ್ಲ. ಪ್ರಚಾರ ಮತ್ತು ಪ್ರಸಿದ್ಧಿಯ ಹಿಂದೆ ಓಡಿದವರೂ ಅಲ್ಲ. ತಮಗೆ ಸಿಕ್ಕಿದ್ದನ್ನು ವಿನಯವಾಗಿ ತಮ್ಮದಾಗಿಸಿಕೊಂಡವರು. ಮಹಾ ಮೌನಿಯಾಗಿಯೇ ಅಸಾಧ್ಯವಾದದ್ದನ್ನು ಸಂಗೀತ ಕ್ಷೇತ್ರದಲ್ಲಿ ಸಾಧಿಸಿದ ಜೋಶಿ ಪದ್ಮಶ್ರೀ, ಪದ್ಮವಿಭೂಷಣ, ದೇಶಿಕೋತ್ತಮ, ಗೌರವ ಡಾಕ್ಟರೇಟ್, ಸ್ವರ ಭಾಸ್ಕರ ಸಂಗೀತಚಾರ್ಯ ಹೀಗೆ ನೂರಾರು ಪ್ರತಿಷ್ಠಿತ ಪ್ರಶಸ್ತಿಗಳೊಂದಿಗೆ ಭಾರತದ ಅತ್ಯುನ್ನತ ಪ್ರಶಸ್ತಿಯಾದ ಭಾರತರತ್ನ ಪ್ರಶಸ್ತಿಗೂ ಭಾಜನರಾದವರು.

ಶತಮಾನದ ಅದ್ಭುತ ವ್ಯಕ್ತಿ ಮತ್ತು ಮಹಾನ್ ಸಾಧಕ ಭೀಮಸೇನ ಜೋಶಿ ಅವರು ಜನವರಿ 24 2011ರಂದು ಭೂಲೋಕದಲ್ಲಿ ಹಾಡುವುದನ್ನು ನಿಲ್ಲಿಸಿದರು. ಅರ್ಥಾತ್ ಕೊನೆಯುಸಿರೆಳೆದರು.

## ಅನಾಥ ಹೆಣ್ಣುಮಕ್ಕಳಿಗೆ ಆಶ್ರಯ ನೀಡುತ್ತಿರುವ ಅಬಲಾಶ್ರಮ

ಬೆಂಗಳೂರಿನ ಬಸವನಗುಡಿಯಲ್ಲಿರುವ ಅಬಲಾಶ್ರಮ ಸಂಘದ ಸ್ವಯಂಸೇವಕರ ಸಹಯೋಗದೊಂದಿಗೆ ನಡೆಯುತ್ತಿದೆ. ಅಸಹಾಯಕ ಹೆಣ್ಣುಮಕ್ಕಳನ್ನು ಮತ್ತೆ ಸಮಾಜದಲ್ಲಿ ಗೌರವಾನ್ವಿತ ಜೀವನವನ್ನು ನಡೆಸಲು ನೆರವಾಗುತ್ತಿದೆ. ಅಬಲಾಶ್ರಮ ಎಂಬ ಈ ವಿಶಿಷ್ಟ ಕುಟುಂಬವು ಅದೆಷ್ಟೋ ಜನ ಸಮಸ್ಯೆಗಳಿಂದ ಪೀಡಿತ ಅನಾಥ ಹೆಣ್ಣುಮಕ್ಕಳ ಜೀವನದಲ್ಲಿ ತಾಯಿಯ ಸಹಜ ವಾತ್ಸಲ್ಯ ಹಾಗೂ ತಂದೆಯ ಶಿಸ್ತಿನ ಆರೈಕೆ ಎರಡರ ಕೊರತೆಯನ್ನು ನೀಗಿಸಿದೆ. ಅಲ್ಲದೆ ಅವರನ್ನು ಬೇರೆಕಡೆಗಳಲ್ಲಿ ಉದ್ಯೋಗಕ್ಕೆ ನಿಯೋಜಿಸುವ ಪ್ರಯತ್ನಗಳನ್ನೂ ಮಾಡಲಾಗುತ್ತದೆ.

ಸುಮಾರು 100 ವರ್ಷಕ್ಕೂ ಹಿಂದೆ 1905ರಲ್ಲಿ ಆರ್ಯಸಮಾಜದ ಉತ್ಸಾಹಿ ಯುವಕ ಚಕ್ರವರ್ತಿ ವೆಂಕಟವರ್ಧಾ ಅಯ್ಯಂಗಾರ್ ಅವರಿಂದ ಅಬಲಾಶ್ರಮದ ಅಡಿಪಾಯವನ್ನು ಹಾಕಲಾಯಿತು. ಅವರೇ ಸ್ವತಃ ಒಬ್ಬ ವಿಧವೆಯನ್ನು ಮದುವೆ ಮಾಡಿಕೊಳ್ಳುವ ಮೂಲಕ ಸಂಪ್ರದಾಯದ ಹೆಸರಲ್ಲಿ ಹೆಣ್ಣಿಗಾಗುತ್ತಿದ್ದ ಅನ್ಯಾಯದ ವಿರುದ್ಧ ನಿಂತರು. ಅಯ್ಯಂಗಾರ್ ಅವರ ಮನೆಯಿಂದಲೇ ವಿಧವೆಯರ ಪುನರುಜ್ಜೀವನದ ಪ್ರತಿಜ್ಞೆಯೊಂದಿಗೆ ಪ್ರಾರಂಭವಾದ ಅಬಲಾಶ್ರಮವು ಇಂದು ಕರ್ನಾಟಕದಲ್ಲಿ ಒಂದು ವಿಶಾಲವಾದ ವೃಕ್ಷದ ರೂಪವನ್ನು ತಳೆದು ತನ್ನ ನೆರಳಿನಲ್ಲಿ ನೂರಾರು ಹೆಣ್ಣುಮಕ್ಕಳಿಗೆ ಸಮೃದ್ಧ ಹಾಗೂ ಸ್ವತಂತ್ರ ಜೀವನವನ್ನು ನೀಡುತ್ತಿದೆ ಎಂದು ಅಬಲಾಶ್ರಮದ ನಿರ್ವಹಣಾ ಸಮಿತಿಯ ಕಾರ್ಯದರ್ಶಿ, ಈ ಹಿಂದೆ ಬಸವನಗುಡಿ ನಗರದ ಸಂಘಚಾಲಕರಾಗಿದ್ದ ಬಿ.ವಿ. ಶೇಷಾರವರು ತಿಳಿಸುತ್ತಾರೆ.


ಶ್ರೀ ಶೇಷಾ ಅವರು ಇಂದಿಗೂ ಮೊದಲ ಬಾರಿಗೆ ಇಲ್ಲಿಗೆ ಬಂದ ಆ ಕ್ಷಣವನ್ನು ನೆನಪಿನಲ್ಲಿಟ್ಟುಕೊಂಡಿದ್ದಾರೆ. ಅವರು ಇಲ್ಲಿಗೆ ಬಂದ ಮೊದಲ ದಿನದಿಂದಲೇ ಅಬಲಾಶ್ರಮದವರಾಗಿಬಿಟ್ಟರು. ಇಂದು ಸಂಘದ ಸ್ವಯಂಸೇವಕರು ತಮ್ಮ ಸೇವಾ ಸಮರ್ಪಣೆಯಿಂದ ಈ ಸಂಸ್ಥೆಯನ್ನು ಎತ್ತರದ ಸ್ತರಕ್ಕೆ ಕೊಂಡೊಯ್ದಿದ್ದಾರೆ. ಆಶ್ರಮದ ವ್ಯವಸ್ಥೆಯನ್ನು ಕೇವಲ ಪಾರದರ್ಶಕವಾಗಿ ಹಾಗೂ ಸಮಾಜಾಭಿಮುಖಿಯಾಗಿ ಮಾಡಿದ್ದಲ್ಲದೆ ಅಲ್ಲಿಯ ಹೆಣ್ಣುಮಕ್ಕಳ ಜೀವನದಲ್ಲಿ ಸಂಸ್ಕಾರ ಮತ್ತು ದೇಶಭಕ್ತಿಯನ್ನು ತುಂಬುವ ಮೂಲಕ ಅವರಲ್ಲಿ ದೇಶಕ್ಕಾಗಿ ಬದುಕುವ ಮನೋಭಾವವನ್ನು ಕಲಿಸಿದ್ದಾರೆ. ಈ ಆಶ್ರಮದಿಂದ ಹೊರಬಂದ ಕೆಲವು ಹೆಣ್ಣು ಮಕ್ಕಳು ತಮ್ಮ ಜೀವನದ ಕೆಲವು ವರ್ಷಗಳನ್ನು ವನವಾಸಿಗಳ ಸೇವಾಕಾರ್ಯವನ್ನು ಮಾಡಲು ವ್ಯಯಿಸಿದ್ದಾರೆ.

ಅಬಲಾಶ್ರಮದಲ್ಲಿ ಬೇರೆ ಆಶ್ರಮಗಳಿಗಿಂತ ಭಿನ್ನವಾಗಿರುವ ವಿಷಯವೆಂದರೆ ಇಲ್ಲಿ ಕೇವಲ 16 ರಿಂದ 25 ವರ್ಷ ವಯಸ್ಸಿನ ಹೆಣ್ಣುಮಕ್ಕಳಿಗೆ ಮಾತ್ರ ಪ್ರವೇಶ ದೊರೆಯುತ್ತದೆ. ಏಕೆಂದರೆ ಚಿಕ್ಕ ಮಕ್ಕಳನ್ನು ನೋಡಿಕೊಳ್ಳುವುದಕ್ಕಾಗಿ ಅನೇಕ ಸಂಸ್ಥೆಗಳಿವೆ. ಹಾಗಾಗಿ ಈ ವಿಭಾಗದಲ್ಲಿ ಅಬಲಾಶ್ರಮ ಕಾರ್ಯ ನಿರ್ವಹಿಸುತ್ತಿದೆ ಎಂದು ಶೇಷಾ ಅವರು ಹೇಳುತ್ತಾರೆ. ಹೆಣ್ಣುಮಕ್ಕಳು ಹದಿಹರೆಯದ ಹೊಸ್ತಿಲಿಗೆ ಹೆಜ್ಜೆ ಇಟ್ಟಾಗ, ಅನೇಕ ಸಂಸ್ಥೆಗಳಿಗೆ ಅವರ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಹಲವು ಸಮಸ್ಯೆಗಳು ತಲೆದೋರುತ್ತವೆ. ಅಂತಹ ಪರಿಸ್ಥಿತಿಯಲ್ಲಿ ಅಬಲಾಶ್ರಮ ಆ ಹೆಣ್ಣುಮಕ್ಕಳ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಮುಂದಾಗುತ್ತದೆ. ಅಬಲಾಶ್ರಮವು ಅಲ್ಲಿಯ ಹೆಣ್ಣುಮಕ್ಕಳಲ್ಲಿ ಸುರಕ್ಷತೆ, ಸ್ವಾವಲಂಬನೆ, ಸಾಮರಸ್ಯ, ಸಂಸ್ಕೃತಿ, ಸ್ವಾಭಿಮಾನ, ಸೇವೆ, ಹೀಗೆ ಅನೇಕ ವಿಚಾರಗಳ ಬಗ್ಗೆ ಪ್ರಾಮುಖ್ಯತೆ ನೀಡುವ ಮೂಲಕ ಕರ್ನಾಟಕದಾದ್ಯಂತ ತನ್ನ ಛಾಪು ಮೂಡಿಸಿದೆ.



## ಎಲ್ಲೋ ಕೇಳಿದ ಕಥೆ

### ಬಾಳಿಗೆ ದಿಕ್ಕು ತೋರಿದ ಪುಟ್ಟ ಭಾಷಣ



ಇಸವಿ 1929. ಒಂದು ಸಂಜೆ ಶಾಖೆ ನಡೆಯುತ್ತಿದ್ದಾಗಲೇ ತಲುಪಿದ್ದ ಏನೋ ಒಂದು ಸುದ್ದಿ ಡಾ. ಕೇಶವ ಬಲಿರಾಮ್ ಹೆಡಗೇವಾರ್ ಅವರ ಮನದಲ್ಲಿ ಭಾರೀ ತುಮುಲವೆಬ್ಬಿಸಿತು. ಅಂದು ನಿತ್ಯದ ಪ್ರಾರ್ಥನೆಯ ಸಮಯಕ್ಕಿಂತ ಮುಂಚಿತವಾಗಿ ಎಲ್ಲ ಸ್ವಯಂಸೇವಕರನ್ನು ಒಂದೆಡೆ ಸೇರಿಸಲು ಅವರು ಮುಖ್ಯ ಶಿಕ್ಷಕನಿಗೆ ಸೂಚನೆಕೊಟ್ಟರು. ಪ್ರಾರ್ಥನಾ ಪೂರ್ವದ ವಿಧಿಗಳು ಮುಗಿಯುತ್ತಿದ್ದಂತೆಯೇ ಅವರು ಸ್ವಯಂಸೇವಕರ ಮುಂದೆ ಬಂದು ನಿಂತರು. ಅವರ ಗಂಭೀರ ಮುಖಭಾವ ಏನೋ ಅನಿಷ್ಟಕರ ಸಂಗತಿಯೊಂದು ಘಟಿಸಿರಬೇಕೆಂಬುದನ್ನು ಸಂಕೇತಿಸುವಂತಿತ್ತು. ಅವರು ಮಾತು ಆರಂಭಿಸಿದರು. ಕೇವಲ ಎರಡೇ ನಿಮಿಷಗಳ ಪುಟ್ಟ ಭಾಷಣ.

"ಈ ಹಿಂದೆ ಸ್ವಾತಂತ್ರ್ಯವೀರ ಸಾವರಕರರಿಗೆ ರತ್ನಾಗಿರಿಯಲ್ಲಿ ಸ್ಥಾನಬದ್ಧತೆಯ ಶಿಕ್ಷೆಯನ್ನು ಬ್ರಿಟಿಷ್ ಸರಕಾರವು ವಿಧಿಸಿತ್ತು. ಅದನ್ನೀಗ ಇನ್ನೆರಡು ವರ್ಷಗಳ ಕಾಲ ಹೆಚ್ಚಿಸಿರುವುದಾಗಿ ಇಂದು ಸರಕಾರವು ಆಜ್ಞೆ ಹೊರಡಿಸಿದೆ. ಅದಕ್ಕಾಗಿ ಪ್ರಾರ್ಥನೆ ಮುಗಿದ ಕೂಡಲೇ ನಿಶ್ಶಬ್ದವಾಗಿ ನಮ್ಮ ಮನೆಗಳಿಗೆ ಹೋಗಿ ಈ ಬಗ್ಗೆ ಆಳವಾಗಿ ಚಿಂತಿಸೋಣ. ಸ್ವಾತಂತ್ರ್ಯ ಸಮರದ ಓರ್ವ ಮಹಾಯೋಧನಿಗಾದ ಅವಮಾನ ನಮ್ಮೆಲ್ಲ ದೇಶಬಾಂಧವರಿಗೂ ಆದ ಅವಮಾನವೇ. ನಮ್ಮ ಆತ್ಮಾಭಿಮಾನಕ್ಕೆ ಹತ್ತಿರುವ ಘೋರ ಕಳಂಕ."

ಡಾಕ್ಟರ್‌ಜಿಯವರ ಕಂಠ ಜಿಗಿದು ಬಂತು. ಅವರ ಮನದಲ್ಲಿ ಹೊತ್ತಿ ಉರಿದ ಬೆಂಕಿ ಸಂಘಸ್ಥಾನದಲ್ಲಿದ್ದವರೆಲ್ಲರ ಅಂತಃಕರಣಕ್ಕೆ ತಟ್ಟಿತು.

ಆಗ ತಾನೇ ಸಂಘದ ಶಾಖೆಗೆ ಬರಲಾರಂಭಿಸಿದ ಕಿಶೋರ ಯಾದವ. ಆ ಪುಟ್ಟ–ಕೇವಲ ಎರಡು ನಿಮಿಷಗಳ ಭಾಷಣ ಮನಸ್ಸಿಗೆ ತಟ್ಟಿತು. ಅವನ ಕಣ್ಣುಗಳು ತೇವಗೊಂಡವು. ದೇಶಮಾತೆಯ ಅವಮಾನದ ಕಳಂಕ ತೊಳೆಯಲು ತಾನೂ ಮುಂದಾಗಬೇಕೆಂಬ ಸಂಕಲ್ಪ ಬೀಜ, ಅಂದು ಅವನ ಮನದಲ್ಲಿ ಮೊದಲ ಬಾರಿಗೆ ಬಿತ್ತಲ್ಪಟ್ಟಿತ್ತು. ಬಾಳಿಗೊಂದು ದಿಕ್ಕು ಲಭಿಸಿತು. ಡಾಕ್ಟರಜಿಯವರ ಪುಟ್ಟ ಭಾಷಣ ಅಷ್ಟು ಪ್ರಭಾವಿಯಾಗಿತ್ತು.

## ಪುಸ್ತಕ ಪರಿಚಯ

### ಶ್ರೀರಾಮ ಜಯಂ

**ಲೇಖಕ:** ಕಾ. ಶ್ರೀ. ನಾಗರಾಜ

**ಬೆಲೆ:** 150ರೂ

ಭಾರತದ ಧರ್ಮಸಂಸ್ಕೃತಿಗಳ ಅವಿಭಾಜ್ಯ ಅಂಗ ಶ್ರೀರಾಮ. 'ರಾಮಾಯಣ' ಮಹಾಕಾವ್ಯ ರೂಪದಲ್ಲಿರುವ ಇತಿಹಾಸ ಗ್ರಂಥ. ಅದೊಂದು ಕೇವಲ ಕಾದಂಬರಿ ಹಾಗೂ ಅದರಲ್ಲಿ ಬರುವ ರಾಮ ಮತ್ತು ಇತರ ವ್ಯಕ್ತಿಗಳು ಕಾಲ್ಪನಿಕ ವ್ಯಕ್ತಿಗಳಾಗಿದ್ದಲ್ಲಿ ಅವರುಗಳು ಸಂಚರಿಸಿದ ನೂರಾರು ಸ್ಥಾನಗಳು, ಅವನಿಗೆ ಸಾವಿರಾರು ದೇವಸ್ಥಾನಗಳು, ಕೋಟ್ಯಾಂತರ ಜನರ ಹೃದಯಸಿಂಹಾಸನದಲ್ಲಿ ಇಂದಿಗೂ ರಾರಾಜಿಸುತ್ತಿರುವುದು ಸಾಧ್ಯವಾಗುತ್ತಿರಲಿಲ್ಲ ಎಂಬುದನ್ನು ಈ ಪುಸ್ತಕ ದಾಖಲೆಗಳ ಸಮೇತ ತಿಳಿಸುತ್ತದೆ. ಈ ಹೊತ್ತಿಗೆಯ ಓದಿನಿಂದ ಪುಸ್ತಕದ ಅಧ್ಯಯನದ ಜೊತೆಗೆ ಭಾರತದ ದರ್ಶನವೂ ಆಗುತ್ತದೆ. ರಾಮಾಯಣದ ಇತರ ಪಾತ್ರಗಳ ವಿವರಣೆ, ರಾಮಾಯಣದಲ್ಲಿ ಉಲ್ಲೇಖಿತ ಭೌಗೋಳಿಕ ಪ್ರದೇಶಗಳ ಮಾಹಿತಿ, ಐತಿಹಾಸಿಕ ಸಂಗತಿಗಳನ್ನು ಪುಸ್ತಕ ಒಳಗೊಂಡಿದೆ. ಒಟ್ಟಿನಲ್ಲಿ ಈ ಪುಸ್ತಕ ಅಧ್ಯಯನಶೀಲ ವಿಮರ್ಶ ಸಾಹಿತ್ಯದಂತಿದ್ದು, ಪ್ರತಿ ವ್ಯಕ್ತಿಯ ವ್ಯಕ್ತಿತ್ವವನ್ನು ರಾಮನ ಆದರ್ಶಗಳಿಂದ ರೂಪಿಸಿಕೊಳ್ಳುವುದಕ್ಕೆ ಪ್ರೇರಣೆಯನ್ನೊದಗಿಸುತ್ತದೆ. ಸರ್ವರಲ್ಲೂ ಇರಲೇಬೇಕಾದ ರಾಷ್ಟ್ರೀಯ ಭಾವವನ್ನು ಈ ಪುಸ್ತಕದ ವಸ್ತು ಹೆಚ್ಚಿಸುತ್ತದೆ.




ವೆಬ್‌ಸೈಟ್: www.sahityabooks.com

**ಸಂಪಾದಕೀಯ ಸಹಕಾರ:** ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯ್ ಕೃಷ್ಣ ಹೆಚ್.ವಿ., ಮೇಘ ಪ್ರಮೋದ್, ದೀಕ್ಷಿತ್ ನಾಯರ್ ಮಂಡ್ಯ

# ರಾಮಮಂದಿರ – ರಾಷ್ಟ್ರೀಯ ಸ್ವಾಭಿಮಾನದ ಪುನರುಜ್ಜೀವನದ ಪ್ರತೀಕ

ನಮ್ಮ ಭಾರತದ ಇತಿಹಾಸವು ಕಳೆದ ಸುಮಾರು ಒಂದೂವರೆ ಸಾವಿರ ವರ್ಷಗಳ ಕಾಲ ಆಕ್ರಮಣಕಾರಿಗಳೊಡನೆ ನಡೆದ ಸಂಘರ್ಷದ ಇತಿಹಾಸವಾಗಿದೆ. ಪ್ರಾರಂಭದಲ್ಲಿ ಸಂಪತ್ತನ್ನು ಲೂಟಿ ಮಾಡುವ ಉದ್ದೇಶದಿಂದ ಆಕ್ರಮಣಗಳು ನಡೆದರೆ, ಕೆಲವೊಮ್ಮೆ ರಾಜ್ಯವಿಸ್ತಾರದ ಉದ್ದೇಶದಿಂದ (ಅಲೆಕ್ಸಾಂಡರ್‌ನ ಆಕ್ರಮಣದಂತೆ) ಆಕ್ರಮಣಗಳು ನಡೆಯುತ್ತಿದ್ದವು. ಆದರೆ, ಇಸ್ಲಾಮಿನ ಹೆಸರಿನಲ್ಲಿ ಪಶ್ಚಿಮದಿಂದ ನಡೆದ ಆಕ್ರಮಣಗಳು ಈ ಸಮಾಜವನ್ನು ಸಂಪೂರ್ಣ ನಾಶ ಮಾಡುವ ಉದ್ದೇಶದಿಂದ ಮತ್ತು ಸಮಾಜವನ್ನು ಒಡೆಯುವ ಉದ್ದೇಶದಿಂದ ನಡೆದವು. ದೇಶ ಹಾಗೂ ಸಮಾಜವನ್ನು ಸತ್ವಹೀನಗೊಳಿಸಲು, ಅಲ್ಲಿನ ಧಾರ್ಮಿಕ ಸ್ಥಳಗಳನ್ನು ನಾಶಗೊಳಿಸುವುದು ಅವರಿಗೆ ಅನಿವಾರ್ಯವಾಗಿತ್ತು. ಈ ಉದ್ದೇಶದಿಂದಲೇ ವಿದೇಶೀ ಆಕ್ರಮಣಕಾರರು ಭಾರತದಲ್ಲಿ ಮಂದಿರಗಳನ್ನು ನಾಶಗೊಳಿಸಿದರು. ಅದು ಕೇವಲ ಒಂದೆರಡು ಸಲವಲ್ಲ, ಅನೇಕ ಬಾರಿ ನಾಶಗೊಳಿಸಿದರು. ಭಾರತೀಯ ಸಮಾಜವನ್ನು ಸತ್ವಹೀನಗೊಳಿಸಿ, ದುರ್ಬಲರಾದ ಭಾರತೀಯರನ್ನು ಯಾವುದೇ ಅಡೆತಡೆಯಿಲ್ಲದೆ ಶಾಶ್ವತವಾಗಿ ಆಳುವುದು ಅವರ ಉದ್ದೇಶವಾಗಿತ್ತು.

ಅಯೋಧ್ಯೆಯ ಶ್ರೀರಾಮ ಮಂದಿರವನ್ನು ವಿಧ್ವಂಸಗೊಳಿಸಿದ್ದೂ ಈ ಮನೋಭಾವದಿಂದಲೇ ಮತ್ತು ಈ ಉದ್ದೇಶದಿಂದಲೇ. ಆಕ್ರಮಣಕಾರಿಗಳ ಈ ನೀತಿಯು ಕೇವಲ ಅಯೋಧ್ಯೆಯ ಅಥವಾ ಯಾವುದೋ ಒಂದು ಮಂದಿರಕ್ಕೆ ಸೀಮಿತವಾಗಿರಲಿಲ್ಲ, ಅದು ಇಡೀ ಜಗತ್ತಿಗೇ ಅನ್ವಯಿಸಿದ ಯುದ್ಧತಂತ್ರವಾಗಿತ್ತು.

ಭಾರತೀಯ ರಾಜರು ಎಂದೂ ಯಾರ ಮೇಲೂ ಆಕ್ರಮಣ ನಡೆಸಲಿಲ್ಲ, ಆದರೆ ಜಗತ್ತಿನ ವಿವಿಧ ದೇಶಗಳ ರಾಜರುಗಳು ತಮ್ಮ ಸಾಮ್ರಾಜ್ಯದ ವಿಸ್ತರಣೆಗಾಗಿ ಆಕ್ರಮಣಕಾರಿಗಳಾಗಿ ಈ ರೀತಿಯ ದುಷ್ಕೃತ್ಯಗಳನ್ನು ನಡೆಸಿದ್ದಾರೆ. ಆದರೆ ಅವರು ಭಾರತದಲ್ಲಿ ಉದ್ದೇಶಿಸಿದಂತಹ ಪರಿಣಾಮಗಳನ್ನು ಮಾಡಲು ಸಾಧ್ಯವಾಗಿಲ್ಲ. ಇದಕ್ಕೆ ತದ್ವಿರುದ್ಧವಾಗಿ, ಭಾರತೀಯ ಸಮಾಜದ ಶ್ರದ್ಧೆ, ನಿಷ್ಠೆ ಮತ್ತು ಮನೋಬಲಗಳು ಎಂದಿಗೂ ಕಡಿಮೆಯಾಗಲಿಲ್ಲ, ಸಮಾಜವು ತಲೆಬಾಗಲಿಲ್ಲ, ಅವರ ಪ್ರತಿರೋಧದ ಸಂಘರ್ಷ ನಿರಂತರವಾಗಿ ಮುಂದುವರೆಯಿತು. ಹೀಗಾಗಿಯೇ, ಜನ್ಮಸ್ಥಳವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡು ಅಲ್ಲಿ ಮಂದಿರವನ್ನು ಪುನರ್ನಿರ್ಮಿಸಲು ನಿರಂತರ ಪ್ರಯತ್ನಗಳು ನಡೆದವು. ಆ ಗುರಿಯ ಸಾಧನೆಗಾಗಿ ಅನೇಕ ಯುದ್ಧಗಳು, ಸಂಘರ್ಷ ಮತ್ತು ಬಲಿದಾನಗಳು ನಡೆದವು. ಮತ್ತು ರಾಮಜನ್ಮಭೂಮಿಯ ಕುರಿತ ವಿಚಾರ ಹಿಂದುಗಳ ಮನದಲ್ಲಿ ಗಟ್ಟಿಯಾಯಿತು.


1857ರಲ್ಲಿ ವಿದೇಶೀಯರಾದ ಬ್ರಿಟಿಷರ ವಿರುದ್ಧ ಯುದ್ಧದ ಯೋಜನೆಗಳು ಪ್ರಾರಂಭವಾದವು. ಆ ಸಂದರ್ಭದಲ್ಲಿ ಹಿಂದುಗಳು ಮತ್ತು ಮುಸಲ್ಮಾನರು ಒಟ್ಟಾಗಿ ಅವರ ವಿರುದ್ಧ ಹೋರಾಡಲು ನಿರ್ಧರಿಸಿದರು ಮತ್ತು ಆ ನಿಟ್ಟಿನಲ್ಲಿ ಪರಸ್ಪರ ಮಾತುಕತೆಗಳು ನಡೆದವು. ಆ ಸಮಯದಲ್ಲಿ ಮುಸಲ್ಮಾನರು ಗೋಹತ್ಯೆ ನಿಷೇಧ ಹಾಗೂ ಶ್ರೀರಾಮ ಜನ್ಮಭೂಮಿ ವಿಮೋಚನೆ ವಿಚಾರದಲ್ಲಿ ಹಿಂದುಗಳೊಡನೆ ರಾಜಿಯಾಗಲು ಸಿದ್ಧರಾಗಿದ್ದರು. ಬಹದ್ದೂರ್ ಷಾ ಜಾಫರ್ ಅವರು ತಮ್ಮ ಶಪಥಪತ್ರದಲ್ಲಿ ಗೋಹತ್ಯೆ ನಿಷೇಧವನ್ನು ಸಹ ಸೇರಿಸಿದ್ದಾರೆ. ಹೀಗಾಗಿಯೇ ಎರಡೂ ಸಮಾಜಗಳು ಒಗ್ಗಟ್ಟಿನಿಂದ ಹೋರಾಡಲು ಸಾಧ್ಯವಾಗಿದ್ದು. ಆ ಯುದ್ಧದಲ್ಲಿ ಭಾರತೀಯರು ಶೌರ್ಯವನ್ನು ತೋರಿಸಿದರೂ, ದುರದೃಷ್ಟವಶಾತ್ ಈ ಯುದ್ಧದಲ್ಲಿ ಸೋಲಬೇಕಾಯಿತು ಮತ್ತು ಭಾರತಕ್ಕೆ ಸ್ವಾತಂತ್ರ್ಯ ಸಿಗಲಿಲ್ಲ. ಬ್ರಿಟಿಷ್ ಆಳ್ವಿಕೆಯು ಅಡೆತಡೆಯಿಲ್ಲದೆ ಉಳಿಯಿತು. ಆದರೆ, ರಾಮಮಂದಿರಕ್ಕಾಗಿ ಹೋರಾಟ ಮಾತ್ರ ನಿಲ್ಲಲಿಲ್ಲ.

ಬ್ರಿಟಿಷರು ಹಿಂದು-ಮುಸಲ್ಮಾನರ ವಿರುದ್ಧ ಅದಾಗಲೇ ಉಪಯೋಗಿಸುತ್ತಿದ್ದ "ಒಡೆದು ಆಳುವ" ನೀತಿಯು 1857ರ ನಂತರ ಮತ್ತಷ್ಟು ಮುನ್ನೆಲೆಗೆ ಬಂದಿತು. ಭಾರತೀಯರ ಒಗ್ಗಟ್ಟನ್ನು ಮುರಿಯಲು ಬ್ರಿಟಿಷರು ಹೋರಾಟದ ನಾಯಕರನ್ನು ಅಯೋಧ್ಯೆಯಲ್ಲಿ ಗಲ್ಲಿಗೇರಿಸಿದರು ಮತ್ತು ರಾಮಜನ್ಮಭೂಮಿಯ ವಿಮೋಚನೆಯ ಪ್ರಶ್ನೆ ಪರಿಹಾರವಾಗದೆ ಹಾಗೆಯೇ ಉಳಿಯಿತು. ರಾಮಮಂದಿರಕ್ಕಾಗಿ ಹೋರಾಟ ಮುಂದುವರೆಯಿತು.

1947ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಸೋಮನಾಥ ಮಂದಿರದ ಜೀರ್ಣೋದ್ಧಾರವು ಸರ್ವಾನುಮತದಿಂದ ನಡೆದಾಗ, ಈ ರೀತಿಯ ಮಂದಿರಗಳ ಬಗ್ಗೆ ಚರ್ಚೆ ಆರಂಭವಾಯಿತು. ರಾಮಜನ್ಮಭೂಮಿಯ ವಿಮೋಚನೆಗೆ ಸಂಬಂಧಿಸಿದಂತೆ ಇಂತಹ ಎಲ್ಲಾ ಒಮ್ಮತಗಳನ್ನು ಪರಿಗಣಿಸಬಹುದಿತ್ತು, ಆದರೆ ರಾಜಕೀಯದ ದಿಕ್ಕು ಬದಲಾಯಿತು. ಸ್ವಾರ್ಥ ರಾಜಕಾರಣದ ಸ್ವರೂಪಗಳಾದ ಭೇದಭಾವ ಮತ್ತು ತುಷ್ಟೀಕರಣಗಳು ಹೆಚ್ಚು ಪ್ರಚಲಿತವಾದವು ಮತ್ತು ರಾಮಮಂದಿರದ ಪ್ರಶ್ನೆ ಹಾಗೆಯೇ ಉಳಿಯಿತು. ಸರಕಾರಗಳು ಈ



ವಿಚಾರದಲ್ಲಿ ಹಿಂದೂ ಸಮಾಜದ ಆಶಯ ಮತ್ತು ಭಾವನೆಗಳನ್ನು ಪರಿಗಣಿಸಲೇ ಇಲ್ಲ. ಅದರ ಬದಲು, ಸಮಾಜವು ಕೈಗೊಂಡ ಪ್ರಯತ್ನಗಳನ್ನೇ ಹತ್ತಿಕ್ಕಲು ಪ್ರಯತ್ನಿಸಿದವು. ಸ್ವಾತಂತ್ರ್ಯಪೂರ್ವದಿಂದಲೇ ಇದಕ್ಕೆ ಸಂಬಂಧಿಸಿದ ಕಾನೂನು ಹೋರಾಟವೂ ಪ್ರಾರಂಭವಾಗಿತ್ತು ಮತ್ತು ಸ್ವಾತಂತ್ರ್ಯಾನಂತರವೂ ಅದು ಮುಂದುವರೆಯಿತು. ರಾಮಜನ್ಮಭೂಮಿಯ ವಿಮೋಚನೆಗಾಗಿ 1980ರ ದಶಕದಲ್ಲಿ ಜನಾಂದೋಲನವು ಪ್ರಾರಂಭವಾಯಿತು ಮತ್ತು ಮೂವತ್ತು ವರ್ಷಗಳ ಕಾಲ ಮುಂದುವರೆಯಿತು.



1949ರಲ್ಲಿ ರಾಮಜನ್ಮಭೂಮಿಯಲ್ಲಿ ಭಗವಾನ್ ಶ್ರೀ ರಾಮಚಂದ್ರನ ವಿಗ್ರಹವು ಇದ್ದಕ್ಕಿದ್ದಂತೆ ಪ್ರತ್ಯಕ್ಷವಾಯಿತು. 1986ರಲ್ಲಿ ನ್ಯಾಯಾಲಯದ ಆದೇಶದ ಮೇರೆಗೆ ಮಂದಿರದ ಬೀಗವನ್ನು ತೆರೆಯಲಾಯಿತು. ಅದಾದ ನಂತರದಲ್ಲಿ ಹಲವು ಅಭಿಯಾನಗಳ ಮೂಲಕ ಮತ್ತು ಕರಸೇವೆಗಳ ಮೂಲಕ ಹಿಂದೂ ಸಮಾಜದ ಹೋರಾಟವು ಸತತವಾಗಿ ಮುಂದುವರೆಯಿತು. 2010ರಲ್ಲಿ ಅಲಹಾಬಾದ್ ಉಚ್ಚ ನ್ಯಾಯಾಲಯವು ಸ್ಪಷ್ಟವಾದ ತೀರ್ಪನ್ನು ನೀಡಿತ್ತು. ಆದಷ್ಟು ಬೇಗ ಅಂತಿಮ ನಿರ್ಧಾರದ ಮೂಲಕ ಸಮಸ್ಯೆ ಬಗೆಹರಿಸಲು ಮತ್ತಷ್ಟು ಪ್ರಯತ್ನಗಳನ್ನು ಜಾರಿಯಲ್ಲಿಡಬೇಕಾಗಿತ್ತು. 134 ವರ್ಷಗಳ ಕಾನೂನು ಹೋರಾಟದ ನಂತರ 9 ನವೆಂಬರ್ 2019 ರಂದು ಸರ್ವೋಚ್ಚ ನ್ಯಾಯಾಲಯವು ಸತ್ಯ ಮತ್ತು ವಾಸ್ತವಗಳನ್ನು ಪರಿಶೀಲಿಸಿದ ನಂತರ ಸಮತೋಲಿತ ತೀರ್ಪನ್ನು ನೀಡಿತು. ಈ ತೀರ್ಪಿನಲ್ಲಿ ಎರಡೂ ಪಕ್ಷಗಳ ಭಾವನೆಗಳು ಮತ್ತು ವಾಸ್ತವಗಳನ್ನು ಪರಿಗಣಿಸಲಾಗಿದೆ. ನ್ಯಾಯಾಲಯದಲ್ಲಿ ಎಲ್ಲ ಕಕ್ಷಿದಾರರ ವಾದ ಆಲಿಸಿದ ಬಳಿಕ ಈ ತೀರ್ಪು ನೀಡಲಾಗಿದೆ. ಈ ತೀರ್ಪಿನಂತೆ, ಮಂದಿರವನ್ನು ನಿರ್ಮಿಸಲು ವಿಶ್ವಸ್ಥ ಮಂಡಳಿಯನ್ನು ಸ್ಥಾಪಿಸಲಾಯಿತು. ಮಂದಿರದ ಭೂಮಿಪೂಜೆಯು 5 ಆಗಸ್ಟ್ 2020 ರಂದು ನಡೆಯಿತು ಮತ್ತು ಇದೀಗ ಯುಗಾಬ್ದ 5125 ಪುಷ್ಯ ಮಾಸ ಶುಕ್ಲ ಪಕ್ಷ ದ್ವಾದಶಿಯಂದು (22 ಜನವರಿ 2024), ಶ್ರೀ ಬಾಲರಾಮನ ಮೂರ್ತಿಯ ಪ್ರತಿಷ್ಠಾಪನಾ ಸಮಾರಂಭ ನಡೆದಿದೆ.

ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣದ ಸಂದರ್ಭವು ರಾಷ್ಟ್ರೀಯ ಸ್ವಾಭಿಮಾನದ ಪುನರುಜ್ಜೀವನದ ಪ್ರತೀಕವಾಗಿದೆ. ಶ್ರೀರಾಮನ ಚಾರಿತ್ರ್ಯದ ಹಿಂದಿನ ಜೀವನದೃಷ್ಟಿಯನ್ನು ಆಧುನಿಕ ಭಾರತೀಯ ಸಮಾಜವು ಅಂಗೀಕರಿಸುತ್ತಿರುವುದರ ಸಂಕೇತವಾಗಿದೆ. ಶ್ರೀರಾಮನನ್ನು ಮಂದಿರದಲ್ಲಿ 'ಪತ್ರಂ ಪುಷ್ಪಂ ಫಲಂ ತೋಯಂ' (ಎಲೆ, ಹೂವು, ಹಣ್ಣು ಮತ್ತು ನೀರನ್ನು ಉಪಯೋಗಿಸಿ) ವಿಧಾನದಿಂದ ಪೂಜಿಸಲಾಗುತ್ತದೆ ಮತ್ತು ಅದೇ ಸಮಯದಲ್ಲಿ ನಮ್ಮ ಮನಮಂದಿರದಲ್ಲಿ ಶ್ರೀರಾಮನ ಚಿತ್ರವನ್ನು ಸ್ಥಾಪಿಸಿಕೊಂಡು, ಅದರ ಬೆಳಕಿನಲ್ಲಿ ಆದರ್ಶ ನಡವಳಿಕೆಯನ್ನು ನಮ್ಮದಾಗಿಸಿಕೊಳ್ಳುವ ಮೂಲಕ ಶ್ರೀರಾಮನ ಪೂಜೆಯನ್ನು ಮಾಡಬೇಕು. ಏಕೆಂದರೆ, "ಶಿವೋ ಭೂತ್ವಾ ಶಿವಂ ಭಜೇತ್; ರಾಮೋ ಭೂತ್ವಾ ರಾಮಮ್ ಭಜೇತ್" (ಶಿವವನ್ನು ಪೂಜಿಸಲು ಶಿವನೇ ಆಗಬೇಕು; ರಾಮನನ್ನು ಪೂಜಿಸಲು ರಾಮನೇ ಆಗಬೇಕು). ಇದನ್ನೇ ನಿಜವಾದ ಪೂಜೆ ಎಂದು ಕರೆಯಲಾಗುತ್ತದೆ.

ಈ ದೃಷ್ಟಿಯಿಂದ ವಿಚಾರ ಮಾಡಿದಾಗ, ಭಾರತೀಯ ಸಂಸ್ಕೃತಿಯ ಸಾಮಾಜಿಕ ಸ್ವರೂಪದ ಪ್ರಕಾರ "ಮಾತೃವತ್ ಪರದಾರೇಷು ಪರದ್ರವ್ಯೇಷು ಲೋಷ್ಟವತ್। ಆತ್ಮವತ್ ಸರ್ವಭೂತೇಷು, ಯಃ ಪಶ್ಯತಿ ಸ ಪಂಡಿತಃ॥" (ಪರಸ್ತ್ರೀಯರನ್ನು ತಾಯಿಯಂತೆ ಕಾಣುವ, ಬೇರೆಯವರ ಸಂಪತ್ತನ್ನು ಮಣ್ಣಿನಂತೆ ಕಾಣುವ ಮತ್ತು ಇತರ ಎಲ್ಲರನ್ನೂ ತನ್ನಂತೆಯೇ ಕಾಣುವವನೇ ನಿಜವಾದ ಪಂಡಿತ). ಈ ರೀತಿಯಲ್ಲಿ ನಾವೂ ಶ್ರೀರಾಮನ ಆದರ್ಶವನ್ನು ಪಾಲಿಸಬೇಕು.

ಶ್ರೀರಾಮನ ಗುಣಗಳಾದ ಸತ್ಯಸಂಧತೆ, ಬಲ ಹಾಗೂ ಪರಾಕ್ರಮಗಳ ಜೊತೆಗೆ ಕ್ಷಮೆ, ಪ್ರಾಮಾಣಿಕತೆ ಹಾಗೂ ನಮ್ರತೆ, ಎಲ್ಲರೊಂದಿಗೆ ವ್ಯವಹರಿಸುವಲ್ಲಿ ಸಹಾನುಭೂತಿ, ಹೃದಯವಂತಿಕೆ ಮತ್ತು ಕರ್ತವ್ಯಪಾಲನೆಯಲ್ಲಿ ಸ್ವಂತದ ಮಟ್ಟಿಗೆ ಕಠೋರತೆ, ಇತ್ಯಾದಿಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಮತ್ತು ತಮ್ಮ ಕುಟುಂಬಗಳಲ್ಲಿ ಅನುಸರಿಸುವಂತೆ ಆಗಬೇಕು. ಪ್ರಾಮಾಣಿಕತೆ, ಶ್ರದ್ಧೆ ಮತ್ತು ಕಠಿಣ ಪರಿಶ್ರಮದಿಂದ ಪ್ರತಿಯೊಬ್ಬರ ಜೀವನದಲ್ಲೂ ಈ ಗುಣಗಳನ್ನು ತರಲು ಪ್ರಯತ್ನಿಸಬೇಕು.

ಧಾರ್ಮಿಕ ದೃಷ್ಟಿಯಿಂದ ಶ್ರೀರಾಮ ಸಮಾಜದ ಬಹುಸಂಖ್ಯಾತರ ಆರಾಧ್ಯದೈವವಾಗಿದ್ದು, ಶ್ರೀರಾಮಚಂದ್ರನ ಬದುಕು ಇಂದಿಗೂ ಇಡೀ ಸಮಾಜ ಒಪ್ಪಿಕೊಂಡಿರುವ ಆದರ್ಶ. ಹೀಗಾಗಿ, ಸಣ್ಣಪುಟ್ಟ ವಿವಾದಗಳನ್ನಿಟ್ಟುಕೊಂಡು ಎದ್ದಿರುವ ಪರ-ವಿರೋಧಗಳನ್ನು ಕೂಡಲೇ ಅಂತ್ಯಗೊಳಿಸಬೇಕು. ಈ ಸಮಯದಲ್ಲಿ ಹುಟ್ಟಿರುವ ಕಹಿ ಭಾವನೆಗಳೂ ಕೊನೆಯಾಗಬೇಕು. ಸಮಾಜದ ಪ್ರಜ್ಞಾವಂತರು ವಿವಾದ ಸಂಪೂರ್ಣವಾಗಿ ಕೊನೆಗೊಳ್ಳುವಂತೆ ನೋಡಿಕೊಳ್ಳಬೇಕು. ಅಯೋಧ್ಯೆ ಎಂದರೆ 'ಯುದ್ಧ ಇಲ್ಲದ ಸ್ಥಳ', 'ಸಂಘರ್ಷಮುಕ್ತ ಸ್ಥಳ'. ಆದ್ದರಿಂದ, ಇಡೀ ದೇಶದಲ್ಲಿ ಅಯೋಧ್ಯೆಯ ಮಂದಿರದ ಪುನರ್ನಿರ್ಮಾಣದ ವಿಚಾರವೇ ಎಲ್ಲರ ಮನಸ್ಸಿನಲ್ಲಿರುವುದು ಇಂದಿನ ಅಗತ್ಯವಾಗಿದೆ.

ಅಲ್ಲದೆ, ರಾಷ್ಟ್ರೀಯ ಜೀವನವನ್ನು ದೃಷ್ಟಿಯಲ್ಲಿಟ್ಟುಕೊಂಡು ಸಾಮಾಜಿಕ ಜೀವನದಲ್ಲಿ ಅನುಶಾಸನವನ್ನು ಕಾಪಾಡಿಕೊಳ್ಳಬೇಕು. ಶ್ರೀರಾಮ-ಲಕ್ಷ್ಮಣರು ತಮ್ಮ 14 ವರ್ಷಗಳ ವನವಾಸವನ್ನು ಪೂರ್ಣಗೊಳಿಸಿದ್ದು ಮತ್ತು ಬಲಿಷ್ಠ ರಾವಣನೊಂದಿಗೆ ಯಶಸ್ವಿ ಹೋರಾಟವನ್ನು ಮಾಡಿದ್ದು ಅದೇ ಅನುಶಾಸನದ ಬಲದಿಂದ ಎನ್ನುವುದು ನಮಗೆಲ್ಲರಿಗೂ ತಿಳಿದೇ ಇದೆ. ಶ್ರೀರಾಮನ ಚಾರಿತ್ರ್ಯದ ಮೂಲಕ ಪ್ರತಿಬಿಂಬಿತವಾಗುವ ನ್ಯಾಯ, ಕರುಣೆ, ಸದ್ಭಾವ, ನಿಷ್ಪಕ್ಷಪಾತ ದೃಷ್ಟಿ, ಸಾಮಾಜಿಕ ಸಾಮರಸ್ಯದೊಂದಿಗೆ ಸಮಾನತೆ ಮೊದಲಾದ ಸಾಮಾಜಿಕ ಮೌಲ್ಯಗಳು ಸಮಾಜದೆಲ್ಲೆಡೆ ಮತ್ತೊಮ್ಮೆ ವ್ಯಾಪಿಸಬೇಕು. ಶೋಷಣೆಯಿಂದ ಮುಕ್ತವಾದ, ಸಮಾನ ನ್ಯಾಯವನ್ನು ಆಧರಿಸಿರುವ, ಬಲದ ಜೊತೆಜೊತೆಗೆ ಕರುಣೆಯಿಂದಲೂ ಕೂಡಿರುವ ಧೈರ್ಯವಂತ ಸಮಾಜವು ನಿರ್ಮಾಣಗೊಳ್ಳಬೇಕು. ಇದೇ ಶ್ರೀರಾಮನ ಪೂಜೆಯಾಗಲಿದೆ.

ಅಹಂಕಾರ, ಸ್ವಾರ್ಥ ಮತ್ತು ಭೇದಭಾವದಿಂದಾಗಿ ಈ ಪ್ರಪಂಚವು ವಿನಾಶದ ಉನ್ಮಾದದಲ್ಲಿದೆ ಮತ್ತು ಅಂತ್ಯವಿಲ್ಲದ ವಿಪತ್ತುಗಳನ್ನು ತನ್ನ ಮೇಲೆ ತಂದುಕೊಳ್ಳುತ್ತಿದೆ. ಸದ್ಭಾವ, ಏಕತೆ, ಪ್ರಗತಿ ಮತ್ತು ಶಾಂತಿಯ ಮಾರ್ಗವನ್ನು ತೋರಿಸುವ ಜಗದಭಿರಾಮವಾದ ಭಾರತವನ್ನು ಪುನರ್ನಿರ್ಮಿಸುವ ಸರ್ವಕಲ್ಯಾಣಕಾರಿಯಾದ ಹಾಗೂ 'ಸರ್ವೇಷಾಂ ಅವಿರೋಧಿ'ಯಾದ ಅಭಿಯಾನವು ಜನ್ಮಭೂಮಿಗೆ ಶ್ರೀ ಬಾಲರಾಮನ ಪ್ರವೇಶ ಮತ್ತು ಆತನ ಪ್ರಾಣಪ್ರತಿಷ್ಠೆಯೊಂದಿಗೆ ಪ್ರಾರಂಭವಾಗಲಿದೆ. ನಾವು ಈ ಅಭಿಯಾನದ ಸಕ್ರಿಯ ಕಾರ್ಯಾನ್ವಯಕಾರರು. ನಾವೆಲ್ಲರೂ ಜನವರಿ 22ರ ಭಕ್ತಿಮಯ ಉತ್ಸವದ ಈ ಶುಭಸಂದರ್ಭದಲ್ಲಿ, ಮಂದಿರದ ಪುನರ್ನಿರ್ಮಾಣದ ಜೊತೆಜೊತೆಗೆ, ಭಾರತ ಹಾಗೂ ಆ ಮೂಲಕ ಇಡೀ ವಿಶ್ವದ ಪುನರ್ನಿರ್ಮಾಣವನ್ನು ಪೂರ್ಣಗೊಳಿಸಲು ನಾವೆಲ್ಲರೂ ಸಂಕಲ್ಪ ಮಾಡಿದ್ದೇವೆ. ಬನ್ನಿ, ಈ ಭಾವನೆಯೊಂದಿಗೆ ಮುಂದೆ ಸಾಗೋಣ.

ಜಯ್ ಶ್ರೀರಾಮ್

ಲೇಖಕರು: **ಡಾ. ಮೋಹನ್ ಭಾಗವತ್**
(ಸರಸಂಘಚಾಲಕರು, ರಾಷ್ಟ್ರೀಯ ಸ್ವಯಂಸೇವಕ ಸಂಘ)
(ಮೂಲ ಮರಾಠಿಯಿಂದ ಅನುವಾದ)

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th JANUARY 2024 Permitted to post on 29-01-2024
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2024-2026 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26
FORTNIGHTLY 01-02-2024



# ಅಯೋಧ್ಯೆಯಲ್ಲಿ ರಾಮಲಲಾ ವಿರಾಜಮಾನ – 5 ಶತಮಾನಗಳ ಕನಸು ಸಂಪನ್ನ

ಜನವರಿ 22, 2024ರಂದು ರಾಮಜನ್ಮಭೂಮಿ ಅಯೋಧ್ಯೆಯ ರಾಮಮಂದಿರದಲ್ಲಿ ರಾಮಲಲಾನ ಪ್ರಾಣಪ್ರತಿಷ್ಠೆ ಕಾರ್ಯಕ್ರಮ ವೈಭವಯುತವಾಗಿ ಜರುಗಿತು. ರಾಷ್ಟ್ರದ ಪ್ರಧಾನಿ ನರೇಂದ್ರ ಮೋದಿಯವರು ಪ್ರಾಣಪ್ರತಿಷ್ಠಾಪನೆಯನ್ನು ಮಾಡಿದರು. ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ.ಮೋಹನ್ ಭಾಗವತ್, ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಸೇರಿದಂತೆ ರಾಷ್ಟ್ರದ ವಿವಿಧ ಸಂಪ್ರದಾಯ ಸಂತ ಮಹಂತರು, ಹಲವು ಕ್ಷೇತ್ರಗಳ ಸಾಧಕರು, ಗಣ್ಯರು ಉಪಸ್ಥಿತರಿದ್ದರು.

ಜನವರಿ 22ರ ಮಧ್ಯಾಹ್ನ 12.29ರ ಅಭಿಜಿತ್ ಲಗ್ನದಲ್ಲಿ ಶ್ರೀರಾಮಲಲಾನ ಪ್ರಾಣಪ್ರತಿಷ್ಠೆ ಸಂಪನ್ನಗೊಂಡಿತು. ಪೇಜಾವರ ಶ್ರೀಗಳು ಮೂಲಬಿಂಬಕ್ಕೆ ತತ್ತ್ವನ್ಯಾಸ ಮತ್ತು ಮಂತ್ರಾನ್ಯಾಸದ ಮೂಲಕ ಪ್ರಾಣಪ್ರತಿಷ್ಠೆ ನಡೆಸಿದರು. ಇದೇ ವೇಳೆ ಮುಖ ದರ್ಶನದೊಂದಿಗೆ ನೇತ್ರೋನ್ಮಿಲನ ನಡೆಸಲಾಯಿತು. ಪ್ರಧಾನಿಯವರು ಷೋಡಶೋಪಚಾರಸಹಿತ ಪ್ರಥಮ ಆರತಿ ಬೆಳಗಿ ಪ್ರಥಮ ಪೂಜೆ ನೆರವೇರಿಸಿದರು. ಡಾ. ಮೋಹನ್ ಭಾಗವತ್ ಅವರೂ ಆರತಿ ಬೆಳಗಿದರು. ದೇಶದ ನಾನಾ ಭಾಗಗಳಿಂದ ಆಗಮಿಸಿದ್ದ 121 ಅರ್ಚಕರು ಪ್ರಾಣ ಪ್ರತಿಷ್ಠಾ ಪೂರ್ವ ವಿಧಿಗಳಲ್ಲಿ ಭಾಗವಹಿಸಿದ್ದರು.

## ಭಾರತದ 'ಸ್ವ' ಮರಳಿದೆ



ಇಂದು ರಾಮಲಲಾನ ಜೊತೆಗೆ ಭಾರತದ 'ಸ್ವ' ಮರಳಿದೆ. ಇಂದಿನ ಸಂತೋಷವನ್ನು ಪದಗಳಲ್ಲಿ ವರ್ಣಿಸಲು ಸಾಧ್ಯವಿಲ್ಲ. 500 ವರ್ಷಗಳ ಕಾಲ ಅನೇಕ ತಲೆಮಾರುಗಳು ಕಠಿಣ ಪರಿಶ್ರಮದಿಂದ, ಬಲಿದಾನವನ್ನು ನೀಡಿ, ರಕ್ತ ಮತ್ತು ಬೆವರನ್ನು ಹರಿಸಿದ ನಂತರ, ಈ ಸಂತೋಷದ ದಿನ ಇಡೀ ರಾಷ್ಟ್ರಕ್ಕೆ ಲಭ್ಯವಾಗಿದೆ. ಅವರೆಲ್ಲರನ್ನೂ ನಮ್ಮ ಮನದಲ್ಲಿ ಕೃತಜ್ಞತೆಯಿಂದ ಸ್ಮರಿಸೋಣ. ಯಾವ ಧರ್ಮವನ್ನು ಜಗತ್ತಿನಲ್ಲಿ ಸ್ಥಾಪಿಸಲು ಶ್ರೀರಾಮನು ಅವತರಿಸಿದನೋ, ಅದೇ ಧರ್ಮದ ಸ್ಥಾಪನೆಗೆ ನಮ್ಮ ದೇಶದಲ್ಲಿ ನಮ್ಮ ಆಚರಣೆಗಳ ಮೂಲಕ ಅನುಕೂಲಕರ ಪರಿಸ್ಥಿತಿಯನ್ನು ಸೃಷ್ಟಿಸುವುದು ನಮ್ಮ ಕರ್ತವ್ಯ ಆಗುತ್ತದೆ.

**– ಡಾ.ಮೋಹನ್ ಭಾಗವತ್,** ಸರಸಂಘಚಾಲಕರು, ರಾಷ್ಟ್ರೀಯ ಸ್ವಯಂಸೇವಕ ಸಂಘ

## ದೇಶ ರಾಮಮಯವಾಗಿದೆ



ಅಯೋಧ್ಯೆಯ ರಾಮಮಂದಿರದಲ್ಲಿ ರಾಮಲಲಾ ಪ್ರಾಣಪ್ರತಿಷ್ಠಾಪನೆಯು ಭಾವನಾತ್ಮಕ ಕ್ಷಣವಾಗಿದೆ. ಇದು 500 ವರ್ಷಗಳ ಕಾಯುವಿಕೆಯ ನಂತರ ಬಂದ ಕ್ಷಣವಾಗಿದೆ. ನನ್ನ ಹೃದಯದಲ್ಲಿ ವ್ಯಕ್ತಪಡಿಸಲು ಪದಗಳಿಲ್ಲದ ಕೆಲವು ಭಾವನೆಗಳಿವೆ. ಈ ಐತಿಹಾಸಿಕ ಕ್ಷಣದಲ್ಲಿ, ದೇಶದ ಪ್ರತಿ ನಗರ ಮತ್ತು ಹಳ್ಳಿಗಳು ಅಯೋಧ್ಯೆಯಾಗಿ ಮಾರ್ಪಟ್ಟಿವೆ ಮತ್ತು ಪ್ರತಿ ಹಾದಿಯು ರಾಮ ಜನ್ಮಭೂಮಿಯತ್ತ ಸಾಗುತ್ತಿದೆ. ಇಡೀ ದೇಶವೇ 'ರಾಮ ಮಯ' ಆಗಿಬಿಟ್ಟಿದೆ. ನಾವು ತ್ರೇತಾಯುಗವನ್ನು ಪ್ರವೇಶಿಸಿದಂತಿದೆ. ಎಲ್ಲಿ ರಾಮನ ಪ್ರತಿಷ್ಠಾಪನೆ ಆಗಬೇಕಿತ್ತೋ ಅಲ್ಲೇ ಆಗಿದೆ. 'ಮಂದಿರ್ ವಹೀ ಬನಾಯೇಂಗೇ' ಉದ್ಘೋಷ ಸಾಕಾರವಾಗಿದೆ

**– ಯೋಗಿ ಆದಿತ್ಯನಾಥ,** ಉತ್ತರಪ್ರದೇಶ ಮುಖ್ಯಮಂತ್ರಿ

## ನಾನು ಅದೃಷ್ಟಶಾಲಿ

ನಾನು ಈಗ ಭೂಮಿಯ ಮೇಲಿನ ಅತ್ಯಂತ ಅದೃಷ್ಟಶಾಲಿ ವ್ಯಕ್ತಿ ಎಂದು ನಾನು ಭಾವಿಸುತ್ತೇನೆ. ನನ್ನ ಪೂರ್ವಜರು, ಕುಟುಂಬ ಸದಸ್ಯರು ಮತ್ತು ಭಗವಾನ್ ರಾಮಲಲಾ ಅವರ ಆಶೀರ್ವಾದ ಯಾವಾಗಲೂ ನನ್ನೊಂದಿಗೆ ಇರುತ್ತದೆ. ಕೆಲವೊಮ್ಮೆ ಕನಸಿನ ಲೋಕದಲ್ಲಿ ಇದ್ದೇನೆ ಎಂದು ನನಗೆ ಅನಿಸುತ್ತಿದೆ.

**– ಅರುಣ್ ಯೋಗಿರಾಜ್,** ರಾಮಲಲಾ ವಿಗ್ರಹದ ಶಿಲ್ಪಿ.

## ರಾಮ ಭಾರತದ ಆಧಾರ



ರಾಮ ಭಾರತದ ಅಸ್ಮಿತೆ,
ರಾಮ ಭಾರತದ ಆಧಾರ.
ರಾಮ ಭಾರತದ ವಿಚಾರ,
ರಾಮ ಭಾರತದ ವಿಧಾನ.
ರಾಮ ಭಾರತದ ಚೇತನ,
ರಾಮ ಭಾರತದ ಚಿಂತನ.
ರಾಮ ಭಾರತದ ಪ್ರತಿಷ್ಠೆ,
ರಾಮ ಭಾರತದ ಪ್ರತಾಪ. ರಾಮ ಪ್ರವಾಹವೂ ಹೌದು, ಪ್ರಭಾವವೂ ಹೌದು. ರಾಮ ನೇತಿಯೂ (ಸಂಯಮ) ಹೌದು, ನೀತಿಯೂ ಹೌದು.


**– ನರೇಂದ್ರ ಮೋದಿ,** ಪ್ರಧಾನಮಂತ್ರಿ



















ಓದುಗರೇ ಗಮನಿಸಿ
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.